ಹುಯ್ಯೋ ಹುಯ್ಯೋ ಮಳೆರಾಯ!

ವಾಯುಮಾಲಿನ್ಯ ತೊಡೆಯಲು ಮಳೆಯ ಮುಲಾಮು

ರಾಷ್ಟ್ರ ರಾಜಧಾನಿ ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಾಯುಮಾಲಿನ್ಯವು ಅತಿರೇಕದ ಮಟ್ಟಕ್ಕೇರಿರುವ ಸಂಗತಿ ಈಗಾಗಲೇ ನಿಮಗೆ ತಿಳಿದಿದೆ. ಇದನ್ನು ತಹಬಂದಿಗೆ ತರಲು ದೆಹಲಿಯ ಅರವಿಂದ ಕೇಜ್ರಿವಾಲರ 'ಆಮ್ ಆದ್ಮಿ' ಸರಕಾರವು ಕೃತಕ ಮಳೆಗೆ ಮೊರೆಹೋಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಕುರಿತಾದ ಒಂದು ಇಣುಕುನೋಟ ಇಲ್ಲಿದೆ.

ಉಸಿರಾಡುವುದೇ ದುಸ್ತರವಾಗಿದೆ

ಹೌದು. ರಾಷ್ಟ್ರ ರಾಜಧಾನಿ ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಅನುಭವಕ್ಕೆ ಬರುವ ಅಪ್ರಿಯಸತ್ಯವಿದು. ಮನೆಯಿಂದ ಹೊರಗೆ ಹೊರಡುವಾಗ ಮಾಸ್ಕ್ ಧರಿಸಲೇಬೇಕು ಎಂಬಂಥ ಅನಿವಾರ್ಯ ಪರಿಸ್ಥಿತಿಗೆ ದೆಹಲಿಯ ನಾಗರಿಕರು ಸಾಕ್ಷಿಯಾಗಿದ್ದಾರೆ. ಅಸಹನೀಯ ಧೂಳು, ತೇಲಾಡುವ ಕಣಗಳು, ವಿಷಕಾರಿ ಘಟಕಗಳಿಂದ ಕೂಡಿದ ಹೊಗೆ ಹೀಗೆ ಹಲವು ಕಾರಣಗಳಿಂದಾಗಿ ಇಲ್ಲಿನ ಗಾಳಿಯ ಗುಣಮಟ್ಟ ಅದೆಷ್ಟು ಹದಗೆಟ್ಟಿದೆ ಎಂದರೆ ಕೆಲವೇ ಅಡಿಗಳಷ್ಟು ದೂರದಲ್ಲಿ ನಿಂತವರ ಮುಖದ ಗುರುತೂ ಸಿಗದಷ್ಟು. ಈ ದುಸ್ಥಿತಿಯನ್ನು ತಹಬಂದಿಗೆ ತರಲು ಕ್ರಮ ಕೈಗೊಳ್ಳದೇ ಹೋದರೆ, ಹೊಟ್ಟೆ ಹೊರೆಯುವುದಕ್ಕಾಗಿನ ದೈನಂದಿನ ಕೆಲಸ-ಕಾರ್ಯಗಳನ್ನೂ ಬಿಟ್ಟು ಮನೆಯಲ್ಲೇ ಕೂರಬೇಕಾಗುತ್ತದೆ ಎಂಬುದು ದೆಹಲಿ ವಾಸಿಗಳ ಅಳಲು.

ಕಡಿವಾಣಕ್ಕೆ ಸಚಿವರ ಕ್ರಮ

ದೆಹಲಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿನ ಗಾಳಿಯ ಗುಣಮಟ್ಟ ಸೂಚ್ಯಂಕವು (ಏರ್ ಕ್ವಾಲಿಟಿ ಇಂಡೆಕ್ಸ್- ಎಕ್ಯುಐ) ಸಹನೀಯ ಮಟ್ಟವನ್ನು ಯಾವಾಗಲೋ ದಾಟಿದ್ದು ಇದನ್ನು ತೀವ್ರ ಅಪಾಯಕಾರಿ ಎಂದು ಪರಿಗಣಿಸಲಾಗಿದೆ. ದಿನಗಳೆದಂತೆ ಏರುತ್ತಲೇ ಇರುವ ವಾಯುಮಾಲಿನ್ಯಕ್ಕೆ ಲಗಾಮು ಹಾಕೆ, ಹದಗೆಡುತ್ತಿರುವ ಗಾಳಿಯ ಗುಣಮಟ್ಟವನ್ನು ಸುಧಾರಿಸಲೆಂದು ಮೋಡಬಿತ್ತನೆ ಉಪಕ್ರಮದ ಮೂಲಕ ಕೃತಕವಾಗಿ ಮಳೆಯನ್ನು ಉಂಟುಮಾಡುವ ಕುರಿತು ದೆಹಲಿ ಸರಕಾರ ಆಲೋಚಿಸುತ್ತಿದೆ ಎಂದು ಪರಿಸರ ಖಾತೆ ಸಚಿವ ಗೋಪಾಲ ರೈ ಮಾಹಿತಿ ನೀಡಿದ್ದಾರೆ. ಈ ಆಲೋಚನೆಯ ಮುಂದುವರಿದ ಭಾಗವಾಗಿ ಐಐಟಿ ಕಾನ್ಪುರದ ವಿಜ್ಞಾನಿಗಳು ಮತ್ತು ವಿಷಯ ತಜ್ಞರೊಂದಿಗೆ ಅವರು ಈಗಾಗಲೇ ವಿಚಾರ ವಿನಿಮಯ ನಡೆಸಿದ್ದು, ಇದರ ಸಾಧಕ-ಬಾಧಕಗಳ ಕುರಿತಾದ ಚರ್ಚೆಯೂ ಈ ವೇಳೆ ನಡೆದಿದೆ ಎನ್ನಲಾಗಿದೆ.

ತಜ್ಞರ ಅಭಿಪ್ರಾಯವೇನು?

ಸಚಿವರೊಂದಿಗಿನ ವಿಚಾರ ವಿನಿಮಯ ಸಭೆಯಲ್ಲಿ ಪಾಲ್ಗೊಂಡಿದ್ದ ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವಂತೆ, ವಾತಾವರಣದಲ್ಲಿ ತೇವಾಂಶ ಅಥವಾ ಮೋಡಗಳ ಅಸ್ತಿತ್ವ ಇರುವಾಗ ಮಾತ್ರವೇ (ಅಂದರೆ, ಮೋಡಗಳಲ್ಲಿ ಕನಿಷ್ಠ ಶೇ.40ರಷ್ಟು ಪ್ರಮಾಣದಲ್ಲಿ ತೇವಾಂಶ ಇರುವಾಗ) ಈ ಉಪಕ್ರಮಕ್ಕೆ ಮುಂದಾಗಬಹುದು. ಈ ತಿಂಗಳ 20 ಮತ್ತು 21ರಂದು ವಾತಾವರಣದಲ್ಲಿ ಇಂಥ ಅನುಕೂಲಕರ ಸ್ಥಿತಿ ರೂಪುಗೊಳ್ಳಬಹುದು ಎನ್ನಲಾಗಿದೆ. ಕೃತಕ ಮಳೆ ಸುರಿಸುವ ತಂತ್ರಜ್ಞಾನದ ಕುರಿತಾಗಿ ಈಗಾಗಲೇ ವಿಸ್ತೃತ ಅಧ್ಯಯನ ಮತ್ತು ಸಂಶೋಧನೆ ನಡೆಸಿರುವ ಐಐಟಿ ಕಾನ್ಪುರದ ವಿಜ್ಞಾನಿಗಳು ಈ ಬಗ್ಗೆ ಹಾಗೂ ಸಾಧ್ಯಾಸಾಧ್ಯತೆಗಳ ಕುರಿತಾಗಿ ಸಚಿವರಿಗೆ ಕೆಲ ದಿನಗಳ ಹಿಂದೆ ಚಿತ್ರಸಹಿತ ಪ್ರಸ್ತುತಿ ನೀಡಿದ್ದರು ಎಂದು ತಿಳಿದುಬಂದಿದೆ. ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಿ ಉದ್ದೇಶಿತ ಕಾರ್ಯವನ್ನು ಸಾಧಿಸಲು ಕೇಂದ್ರ ಸರಕಾರ ಮತ್ತು ದೆಹಲಿ ರಾಜ್ಯ ಸರಕಾರ ಎರಡರಿಂದಲೂ ಅಂದರೆ, ಗೃಹ ಸಚಿವಾಲಯ ಹಾಗೂ ವಿಶೇಷ ರಕ್ಷಣಾ ಗುಂಪು (ಎಸ್‌ಪಿಜಿ) ಸೇರಿದಂತೆ ವಿವಿಧ ಸ್ತರದ ಅಧಿಕಾರಿಗಳಿಂದ ಅಗತ್ಯ ಅನುಮತಿಗಳನ್ನು ಪಡೆಯಬೇಕಾಗುತ್ತದೆ ಎಂಬುದಿಲ್ಲಿ ಉಲ್ಲೇಖನೀಯ.

ಕೃತಕ ಮಳೆ ಎಂದರೇನು?

ಹೆಸರೇ ಸೂಚಿಸುವಂತೆ ಕೃತಕ ಮಳೆ ಅಥವಾ ಮೋಡಬಿತ್ತನೆ ಎಂಬುದು ಪ್ರಸ್ತುತ ಅಸ್ತಿತ್ವದಲ್ಲಿರುವ ಹವಾಮಾನವನ್ನು ಅಪೇಕ್ಷಿತ ರೀತಿಯಲ್ಲಿ ಮಾರ್ಪಡಿಸುವ ಒಂದು ತಂತ್ರಜ್ಞಾನವಾಗಿದ್ದು, ಮೋಡಗಳಲ್ಲಿನ ತೇವಾಂಶದ ಘನೀಕರಣ ಪ್ರಕ್ರಿಯೆಯನ್ನು ತ್ವರೆಗೊಳಿಸುವ ಹಾಗೂ ತನ್ಮೂಲಕ ಮಳೆ ಬರಿಸುವ ಕಾರ್ಯವಿಧಾನಗಳನ್ನು ಇದು ಒಳಗೊಂಡಿರುತ್ತದೆ. ಹಾಗೆಂದ ಮಾತ್ರಕ್ಕೆ ಇದು ಅಂದುಕೊಂಡಷ್ಟು ಸಲೀಸು ಕೆಲಸವಲ್ಲ. ಸಿಲ್ವರ್ ಅಯೋಡೈಡ್ ಅಥವಾ ಕ್ಲೋರೈಡ್‌ನಂಥ ಉಪ್ಪಿನ ಕಣಗಳನ್ನು ವಿಮಾನಗಳು ಮತ್ತು ಪ್ರಸರಣದ ಉಪಕರಣಗಳನ್ನು ಬಳಸಿಕೊಂಡು ಮೋಡಗಳ ಮೇಲೆ ಸಿಂಪಡಿಸುವ ಪ್ರಕ್ರಿಯೆಯನ್ನು ಈ ಉಪಕ್ರಮ ಒಳಗೊಂಡಿರುತ್ತದೆ. ಕಾಳ್ಗಿಚ್ಚನ್ನು ಹತೋಟಿಗೆ ತರಲು, ಕ್ಷಾಮದ ವ್ಯತಿರಿಕ್ತ ಪರಿಣಾಮವನ್ನು ತಗ್ಗಿಸಲು, ಮಳೆಯ ಪ್ರಮಾಣವನ್ನು ಹೆಚ್ಚಿಸಲು ಈ ಉಪಾಯಕ್ಕೆ ಮೊರೆಹೋಗುವುದುಂಟು. ಈಗ ಗಾಳಿಯ ಗುಣಮಟ್ಟದ ಸುಧಾರಣೆ ಮತ್ತು ವಾಯುಮಾಲಿನ್ಯ ತಗ್ಗಿಸುವ ಉದ್ದೇಶವೂ ಈ ಪಟ್ಟಿಯಲ್ಲಿ ಸೇರಿಕೊಂಡಂತಾಗಿದೆ.

ಮೋಡಬಿತ್ತನೆಯ ವೈಶಿಷ್ಟ್ಯವೇನು?

ಮೋಡಬಿತ್ತನೆಯ ವೇಳೆ ಆಯ್ಕೆಮಾಡಿಕೊಳ್ಳುವ ಘಟಕ ವಸ್ತುಗಳಲ್ಲೂ ವೈವಿಧ್ಯವಿದೆ. ಪೊಟ್ಯಾಷಿಯಂ ಅಥವಾ ಸಿಲ್ವರ್ ಅಯೋಡೈಡ್ ಅಥವಾ ದ್ರವೀಕೃತ ಪ್ರೊಪೇನ್‌ನಂಥ ಘಟಕಾಂಶಗಳನ್ನು ಈ ಪ್ರಕ್ರಿಯೆಯಲ್ಲಿ ಬಳಸುವುದು ವಾಡಿಕೆ.

ಬೆಚ್ಚಗಿನ ವಾತಾವರಣದಲ್ಲಿ ಕ್ಯಾಲ್ಸಿಯಂ ಕ್ಲೋರೈಡ್ ಅನ್ನು ಘಟಕವಸ್ತುವಾಗಿ ಬಳಸುವುದು ಸಾಮಾನ್ಯ. ಸೋಡಿಯಂ ಕ್ಲೋರೈಡ್ (ಸಾಮಾನ್ಯ ಉಪ್ಪು) ಕೂಡ ಮತ್ತೊಂದು ಸಾಮಾನ್ಯ ಆಯ್ಕೆಯಾಗಿದೆ. ಇವನ್ನು ಹೊರತುಪಡಿಸಿ, ಹೈಗ್ರೋಸ್ಕೋಪಿಕ್ (ಅಂದರೆ ವಾಯುವಿನಿಂದ ತೇವಾಂಶವನ್ನು ಹೀರಿಕೊಳ್ಳುವ) ಜ್ವಾಲೆಗಳನ್ನು ಬಳಸುವ ಪರ್ಯಾಯ ವಿಧಾನವೂ ಅಸ್ತಿತ್ವದಲ್ಲಿದೆ, ಆದರೆ ಇದರ ಬಳಕೆ ಅಪರೂಪ. ಪೊಟ್ಯಾಷಿಯಂ ಅಥವಾ ಸಿಲ್ವರ್ ಅಯೋಡೈಡ್ ಅಥವಾ ದ್ರವೀಕೃತ ಪ್ರೊಪೇನ್ ಅನ್ನು ಮೋಡಗಳಲ್ಲಿ ಪಸರಿಸಲಾಗುತ್ತದೆ/ ಚದುರಿಸಲಾಗುತ್ತದೆ. ಆಗ ನೀರಿನ ಆವಿಯು ಸಾಂದ್ರೀಕರಣಗೊಂಡು ಹನಿಗಳು ಅಥವಾ ಮಂಜಿನ ಸ್ಫಟಿಕಸದೃಶ ಕಣಗಳನ್ನು ರೂಪಿಸುತ್ತವೆ. ಈ ಕಣಗಳು ಕೊನೆಗೆ ವಿಲೀನವಾಗಿ ಬೆಳೆಯುತ್ತವೆ ಹಾಗೂ ಮಳೆಯಾಗಿ ಇಳೆಗೆ ಬೀಳುತ್ತವೆ.

ಹತೋಟಿಗೆ ಹರಸಾಹಸ

ದಿನಗಳೆದಂತೆ ತೀವ್ರಗೊಳ್ಳುತ್ತಿರುವ ವಾಯುಮಾಲಿನ್ಯಕ್ಕೆ ಲಗಾಮು ಹಾಕಲು ದೆಹಲಿ ಸರಕಾರ ಇನ್ನಿಲ್ಲದಂತೆ ಕಸರತ್ತು ಮಾಡುತ್ತಿದೆ. ಹದಗೆಟ್ಟ ವಾಯುಗುಣದಿಂದಾಗಿ ಹಲವು ಶಾಲೆಗಳಲ್ಲಿ ಭೌತಿಕ ತರಗತಿಗಳನ್ನು ಅಮಾನತುಗೊಳಿಸಿ ಆನ್‌ಲೈನ್ ತರಗತಿಗಳಿಗೆ ಚಾಲನೆ ನೀಡಲಾಗಿದೆ. ದಿನ ಬಿಟ್ಟು ದಿನ ಸಮ ಮತ್ತು ಬೆಸ ಸಂಖ್ಯೆಯ ವಾಹನಗಳು ಸಂಚರಿಸುವಂತೆ ಆದೇಶ ಜಾರಿಮಾಡಲಾಗಿದೆ. ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳು ಚಳಿಗಾಲ ಮುಗಿಯುವರೆಗೂ ಈ ಅಸಹನೀಯ ಪರಿಸ್ಥಿತಿಯ ಫಲಾನುಭವಿಗಳಾ ಗುವುದು ಮಾಮೂಲು. ಇದು ರಾಷ್ಟ್ರೀಯ ರಾಜಧಾನಿ ಪ್ರದೇಶ (ಎನ್‌ಸಿಆರ್), ಮಗ್ಗುಲಿನ ಪಂಜಾಬ್, ಹರಿಯಾಣ ರಾಜ್ಯಗಳಿಗೂ ಅನ್ವಯವಾಗುವ ಮಾತು.

ವಾಯುಮಾಲಿನ್ಯಕ್ಕೆ ಇದು ಪ್ರತ್ಯಸ್ತ್ರವೇ?

ವಾಯುಮಾಲಿನ್ಯದ ವಿವಿಧ ಮಗ್ಗುಲುಗಳು ಹಾಗೂ ಅವಕ್ಕೆ ಕಡಿವಾಣ ಹಾಕುವುದಕ್ಕಿರುವ ಕಾರ್ಯಸಾಧ್ಯ ವಿಧಾನಗಳ ಕುರಿತಾಗಿ ಐಐಟಿ-ಕಾನ್ಪುರ ಕಳೆದ ಕೆಲ ವರ್ಷಗಳಿಂದ ಅಧ್ಯಯನದಲ್ಲಿ ನಿರತವಾಗಿದೆ. ಮೋಡಬಿತ್ತನೆ ಮೂಲಕದ ಕೃತಕಮಳೆಯು ಈ ನಿಟ್ಟಿನಲ್ಲಿ ಒಂದು ಪರಿಹಾರೋಪಾಯವಾಗಿ ಹೊರಹೊಮ್ಮಿದೆ. ಕಳೆದ ಜೂನ್‌ನಲ್ಲಿ ಐಐಟಿ ಕಾನ್ಪುರ ಈ ನಿಟ್ಟಿನಲ್ಲಿ ನಡೆಸಿದ ಪರೀಕ್ಷೆ ಯಶ ಕಂಡಿದೆ. ಆದರೆ ಅಲ್ಲಿನ ವಿಜ್ಞಾನಿಗಳು ಮತ್ತು ತಜ್ಞರ ಅಭಿಪ್ರಾಯದಂತೆ ಮೋಡಬಿತ್ತನೆ/ಕೃತಕ ಮಳೆಯ ಉಪಕ್ರಮವು ತಾತ್ಕಾಲಿಕ ಅವಧಿಯವರೆಗೆ ಗಾಳಿಯ ಗುಣಮಟ್ಟವನ್ನು ಸುಧಾರಿಸಬಲ್ಲದೇ ಹೊರತು ಇದು ವಾಯುಮಾಲಿನ್ಯದ ಸಮಸ್ಯೆಗೆ ದೀರ್ಘಾವಧಿಯ ಪರಿಹಾರವಲ್ಲ ಅಥವಾ ಪ್ರತ್ಯಸ್ತ್ರವಲ್ಲ. ಜತೆಗೆ ಮಾಲಿನ್ಯ ನಿಯಂತ್ರಣದ 'ಸಹಜ ಮಾರ್ಗೋಪಾಯ'ಗಳಿಗೆ ಹೋಲಿಸಿದಾಗ ಇದು ಕೊಂಚ ವೆಚ್ಚದಾಯಕ.

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, **ಶ್ರೀ. ರಮೇಶ್ .ಇ,** ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಇವರು ಬೇಗೂರು, ಉಪ ನೋಂದಣಿಗೆಗಳ ಕಛೇರಿಯಲ್ಲಿ ನೋಂದಣಿಯಾಗಿರುವ ಮೂಲ ದಾನ ಪತ್ರದ ದಿನಾಂಕ: 01/03/2010, ರಂದು ಶ್ರೀಮತಿ. ಎನ್. ಶರವಣಮ್ಮ ಇವರಿಂದ ಶ್ರೀ. ಸಿ. ಗೋವಿಂದರಾಜು ಮತ್ತು ಶ್ರೀಮತಿ. ಜಿ. ಲಕ್ಷ್ಮೀ ಇವರ ಹೆಸರಿಗೆ ನೋಂದಣಿ ಮಾಡಿರುವ ದಸ್ತಾವೇಜು ನಂ. 4333/2009-10, ಪುಸ್ತಕ 1, ಸಿಡಿ 35ರಲ್ಲಿ ಸಂಗ್ರಹವಾಗಿರುವ ಮೂಲ ದಾನ ಪತ್ರವನ್ನು ಕಳೆದು ಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಕಂಡಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಪರಪ್ಪನ್ನ ಅಗ್ರಹಾರ ಗ್ರಾಮ, ಇಲ್ಲಿ ಪೂರ್ವದ ಕಡೆ ಇರುವ ಖಾಲಿ ನಿವೇಶನ ನಂ. 32, ಎ.ಪಿ ಖಾತ ನಂ.62, ಅಸೆಸ್‌ಮೆಂಟ್ ನಂ. 62/3, ರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 20 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ : 40 ಅಡಿ, ಒಟ್ಟಾರೆ ವಿಸ್ತೀರ್ಣ 800 ಚದರ ಅಡಿಗಳು, ಮತ್ತು ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು: **ಪೂರ್ವಕ್ಕೆ** : ಖಾಸಗಿ ಸ್ವತ್ತು; **ಪಶ್ಚಿಮಕ್ಕೆ** : ನಿವೇಶನ ನಂ.22ರ ಉಳಿದ ಭಾಗ; **ಉತ್ತರಕ್ಕೆ** : ರಸ್ತೆ; ಮತ್ತು **ದಕ್ಷಿಣಕ್ಕೆ** : ನಿವೇಶನ ನಂ.33.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್ ಆರ್ ಕಾಲೋನಿ ಬಸ್ ನಿಲ್ದಾಣ ಹತ್ತಿರ, ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019, ಮೊ: 9341261700.

PUBLIC NOTICE

DOCUMENT LOST

This is to inform general public and whomsoever it may concern that my client **Mrs. SWETHA CHOUDHARY** is the owner of the schedule property. That she has lost original Sale Deed pertains to the schedule property Document **No.BGR-1-04286-2013-2014 Stored in CD No BGRD 224** Registered at the office of the Sub-Registrar, Begur Bangalore. And in this regard my Client has lodged a complaint before the Bangalore City Police on 17/11/2023, Vide Lost Report No. 0810857/2023. Any person/s finding the said documents or asserting any right, title, interest or claim should write/ inform to the under signed ***within 7 days*** from the date of this notice with documentary proof on which she has basing & asserting her right, with regard to the schedule property, after which period it will be treated that there are no claim of whatsoever nature with regard to the schedule property.

SCHEDULE

Residential Apartment No. **A 211** in the **A** block of second Floor of **S.K ASTER** measuring **1113** square feet of Super built up area with one Covered Car Parking area vide no **A-211** and 394 square feet undivided share of land in Converted Sy No. 112/1 situated at Doddathogur Village Begur Hobli Bangalore South Taluk.

Sd/-

Prasad Badhya., Advocate,
#739/39, First Floor, Dr Rajkumar Road, 6th Block Rajajinagar, Bangalore-560 010.
Mobile:9844788741
Place: Bengaluru. Date:17-11-2023

ಆಸೀಸ್ ಜತೆ ದ.ಆಫ್ರಿಕಾ ಸಿರೀಸ್‌ಗೂ ಇಲ್ಲ ಪಾಂಡ್ಯ

ದೆಹಲಿ: ಬಾಂಗ್ಲಾದೇಶ ವಿರುದ್ಧ ವಿಶ್ವಕಪ್ 2023ಲೀಗ್ ಪಂದ್ಯದಲ್ಲಿ ಇಂಜುರಿಗೆ ತುತ್ತಾಗಿ ಟೀಂ ಇಂಡಿಯಾದಿಂದ ಹೊರಬಿದ್ದಿರುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಈ ಗಾಯ ದಿಂದಾಗಿ ಇನ್ನೆರಡು ತಿಂಗಳು ಮೈದಾನಕ್ಕೆ ಮರಳುವುದಿಲ್ಲ ಎಂದು ವರದಿಯಾಗಿದೆ. ಈ ಇಂಜುರಿಯಿಂದಾಗಿ ತವರಿನಲ್ಲಿ ನಡೆಯಲಿ ರುವ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯ ಜತೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆಯಲ್ಲಿರುವ ಮೂರು ಟಿ20 ಮತ್ತು ಮೂರು ಏಕದಿನ ಪಂದ್ಯಗಳ ಸರಣಿಗ ಳಿಂದ ಲೂ ಪಾಂಡ್ಯ ಹೊರಗುಳಿಯುವ ಸಾಧ್ಯತೆಯಿದೆ.

ಹಾರ್ದಿಕ್ ಪಾಂಡ್ಯ ಅವರಿಗೆ ಶಸ್ತ್ರಚಿಕಿತ್ಸೆ ಅಗತ್ಯವಿದೆಯೇ ಅಥವಾ ಬೇಡವೇ ಎಂಬುದನ್ನು ವೈದ್ಯಕೀಯ ತಂಡ ಇನ್ನೂ ನಿರ್ಧರಿಸಿಲ್ಲ. ಎರಡು ವಾರಗಳ ಹಿಂದೆ ಹಾರ್ದಿಕ್ ಪಾಂಡ್ಯ ಅವರನ್ನು ನೆಟ್‌ನಲ್ಲಿ ಬೌಲಿಂಗ್ ಮಾಡಲು ಕೇಳಲಾಗಿತ್ತು. ಆ ಬಳಿಕ ತರಬೇತುದಾರರು ಕ್ರಮೇಣ ಬೌಲಿಂಗ್ ವೇಗವನ್ನು ಹೆಚ್ಚಿಸಲು ಪಾಂಡ್ಯಗೆ ಸಲಹೆ ನೀಡಿದ್ದರು. ಈ ವೇಳೆ ಪಾಂಡ್ಯಗೆ ಮತ್ತೆ ಕಾಲು ನೋವು ಕಾಣಿಸಿಕೊಂಡಿತು. ಇದರ ನಂತರ, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ವೈದ್ಯಕೀಯ ತಂಡವು ಮತ್ತೊಂದು ಸುತ್ತಿನ ಸ್ಕ್ಯಾನ್ ನಡೆಸಲು ನಿರ್ಧರಿಸಿತ್ತು. ಬಳಿಕ ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಟೀಂ ಇಂಡಿಯಾದಿಂದ ಹೊರಬಿದ್ದಿರುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದ ಪಾಂಡ್ಯ, ನಾನು ವಿಶ್ವಕಪ್‌ನ ಉಳಿದ ಪಂದ್ಯಗಳಲ್ಲಿ ಆಡಲಾಗು ತ್ತಿಲ್ಲ ಎಂಬುದನ್ನು ಅರಗಿಸಿಕೊಳ್ಳುವುದು ಕಷ್ಟ. ಆದರೆ ನಾನು ನನ್ನ ತಂಡದೊಂದಿಗೆ ಇರುತ್ತೇನೆ ಮತ್ತು ಪ್ರತಿ ಪಂದ್ಯದ ಪ್ರತಿ ಬಾಲ್‌ನಲ್ಲಿ ಅವರನ್ನು ಹುರಿದುಂಬಿಸುತ್ತೇನೆ' ಎಂದು ಬರೆದುಕೊಂಡಿದ್ದರು.

ಎಸ್.ವಿ.ಸಿ. ಕೋ – ಆಪರೇಟಿವ್ ಬ್ಯಾಂಕ್ ಲಿ.
ಪ್ರಧಾನ ಕಚೇರಿ : ಕಾನೂನು ಮತ್ತು ವಸೂಲಾತಿ ವಿಭಾಗ, ಎಸ್.ವಿ.ಸಿ. ಟವರ್, ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ-400055.
ಪ್ರಾದೇಶಿಕ ಕಚೇರಿ : ನಂ. 1, ಸೆಂಟ್ರಲ್ ಬ್ಯಾಂಕ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018. ದೂರವಾಣಿ : 080-71231027/28/29/32

ಚಿನ್ನದ ಆಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಎಸ್.ವಿ.ಸಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಿಂದ ಪಡೆದ ಚಿನ್ನದ ಆಭರಣಗಳ ವಿರುದ್ಧ ಸೌಲಭ್ಯಕ್ಕಾಗಿ ತಮ್ಮ ಬಾಕಿ ಮೊತ್ತವನ್ನು ಹಾವತಿಸಲು ಕೆಳಗೆ ಉಲ್ಲೇಖಿಸಿದ ಸಾಲಗಾರರಿಗೆ ನೋಟಿಸ್ ನೀಡಲಾಗಿದೆ.ಬಾಕಿ ಹಣವನ್ನು ಮರುಹಾವತಿಸಲು ವಿಫಲವಾದ ಕಾರಣ ದಿನಾಂಕ: 27ನೇ ನವೆಂಬರ್ 2023ರಂದು ಅಡಮಾನ ಇಟ್ಟಿರುವ ಚಿನ್ನದ ಆಭರಣಗಳ ಹರಾಜು ನಡೆಸಲು ನಾವು ನಿರ್ಬಂಧಿತರಾಗಿದ್ದೇವೆ. ಖಾತೆಯನ್ನು ತೆಗೆದುಹಾಕಲು/ ಯಾವುದೇ ಪೂರ್ವ ಸೂಚನೆ ಯಿಲ್ಲದೆ ಹರಾಜು ದಿನಾಂಕವನ್ನು ಬದಲಾಯಿಸುವ ಅಧಿಕಾರವನ್ನು ಎಸ್.ವಿ.ಸಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಹೊಂದಿರುತ್ತದೆ. ಸಾಲಗಾರರು ಮೃತಪಟ್ಟಿದ್ದಲ್ಲಿ, ಎಲ್ಲಾ ಪರತ್ತುಗಳು ಕಾನೂನುಬದ್ಧ ವಾರಸುದಾರರಿಗೆ ಅನ್ವಯವಾಗುತ್ತವೆ.

ಕ್ರ. ಸಂ	ಸಾಲ ಖಾತೆ ಸಂಖ್ಯೆ	ಸಾಲಗಾರರ ಹೆಸರು ಮತ್ತು ವಿಳಾಸ	ಅಡಮಾನವಿಟ್ಟಿರುವ ಆಭರಣಗಳ ವಿವರ	ಒಟ್ಟು ತೂಕ ಗ್ರಾಂ ಗಳಲ್ಲಿ	ಶಾಖೆಯ ಹೆಸರು ಮತ್ತು ವಿಳಾಸ ಹಾಗೂ ಹರಾಜಿನ ದಿನಾಂಕ
1.	OD-550 Gold Loan	ಶ್ರೀ ಮೊಹಮ್ಮದ್ ಇಮ್ರಾನ್ ಸಂಖ್ಯೆ 66/7, 3ನೇ ಮೈನ್, ಬೇಗೂರು ರಸ್ತೆ, ವಿರಾಟ್ ನಗರ, ಬೆಂಗಳೂರು 560068	1.Necklace 2 no.	91.400	ರಾಜಾಜಿನಗರ ನಂ 666 12ನೇ ಮುಖ್ಯ 3ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560 010

ಹರಾಜು ಬ್ಯಾಂಕಿನ ಶಾಖೆಯ ಆವರಣದಲ್ಲಿ ಬ್ಯಾಂಕ್ ನಿಗದಿಪಡಿಸಿದ ಮಾರಾಟದ ನಿಯಮಗಳು ಮತ್ತು ಷರತ್ತುಗಳಿಗೆ ಒಳ